ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರ ಗಮನಕ್ಕೆ ತಂದಿದ್ದೇನೆ. ಸೇತುವೆಗಳ ನಿರ್ಮಾಣ ಮಾಡಬೇಕಾದ ಕೆಲಸವನ್ನು ಪ್ರಗತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. ರಸ್ತೆಗಳ ಪೈಕಿ ಅನುದಾನವನ್ನು ಕೊಟ್ಟಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ, ಆ ರಸ್ತೆಗಳಿಗೆ ಹಣವನ್ನು ಕೊಡಲು ಅವಕಾಶವನ್ನು ಮಾಡಿಕೊಂಡು ಆ ರಸ್ತೆಗಳನ್ನು ಸುಧಾರಣೆ ಮಾಡುವಂಥ ಕೆಲಸವನ್ನು ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಈ ಪ್ರಶ್ನೆ ಜೋಯಿಡಾ ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರುವ ಪ್ರಶ್ನೆಯಾಗಿರುವುದರಿಂದ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಸಹಕರಿಸಿ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಮಾನ್ಯ ಬಚ್ಚೇಗೌಡರದ್ದು 27 ಕ್ಕೆ ನಿಗದಿಯಾಗಿದೆ. ಈಗ ಜಮೀರ್ ಅಹಮದ್‌ರವರ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

157 ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್.(ಚಾಮರಾಜಪೇಟೆ)

ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

ಅ. ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿಯ ಅವ್ಯವಸ್ಥೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ, ಆದಾಗ್ಯೂ ದುರಸ್ತಿಕಾಮಗಾರಿಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಆ.) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಬೆಂಗಳೂರು ಜಲಮಂಡಳಿಯಿಂದ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ರೂ.38.71 ಲಕ್ಷ ಮೊತ್ತದಲ್ಲಿ ನೀರು ಸರಬರಾಜು ಕೊಳವೆ ಕಾಮಗಾರಿ ಹಾಗೂ ರೂ.104.95 ಲಕ್ಷ ಮೊತ್ತದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳನ್ನು ಹೊರತುಪಡಿಸಿ ತುರ್ತು ಸಮಯದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಾಹೆಯಾನ ಸಣ್ಣ ಕಾಮಗಾರಿಗಳನ್ನು ಸಹ ಆಗಿಂದಾಗ್ಗೆ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.

ಇ.) ಈ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೆ;

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ದಿನಾಂಕ: 30.06.2009ರ ಅಂತ್ಯಕ್ಕೆ ಪೂರ್ಣಗೊಳಿಸಲು ಕಾಲಮಿತಿಯನ್ನು ಹಮ್ಮಿಕೊಳ್ಳಲಾಗಿದೆ.

ಈ.) ನೀರು ಸರಬರಾಜು ಹಾಗೂ ಒಳಚರಂಡಿ ಅವ್ಯವಸ್ಥೆಯ ಕಾಮಗಾರಿಗಳನ್ನು ಸರಿಪಡಿಸಲು ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಇಲ್ಲ; ಮೇಲೆ ತಿಳಿಸಿರುವ ಕಾಮಗಾರಿಗಳಿಗೆ ಅವಶ್ಯವಿರುವ ಹಣವನ್ನು ಬೆಂಗಳೂರು ಜಲಮಂಡಳಿಯು ತನ್ನ ಸ್ವಂತ ಆದಾಯದಿಂದ ಭರಿಸುತ್ತದೆ.

ಉ. ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ನೀಡುವುದು)?

ಉದ್ಭವಿಸುವುದಿಲ್ಲ

ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್:– ಮಾನ್ಯ ಅಧ್ಯಕ್ಷರೆ, ಉತ್ತರಗಳ್ಯಾವುದೂ ಇದುವರೆಗೆ ಬಂದಿರಲಿಲ್ಲ. ಈಗ ಕೊಟ್ಟಿದ್ದಾರೆ. ಕಳೆದ ಬಾರಿ ಬೆಳಗಾಂನಲ್ಲಿ ನಡೆದ ಅಧಿವೇಶನದ ಸಂದರ್ಭದಲ್ಲಿಯೇ ಮಾನ್ಯ ಸಚಿವರಲ್ಲಿ ನಾನು ಮನವಿಯನ್ನು ಮಾಡಿಕೊಂಡಿದ್ದೆ. ಚಾಮರಾಜಪೇಟೆ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ವಿಪರೀತವಾಗಿದೆ. ಸ್ಯಾನಿಟರಿ ಪ್ರಾಬ್ಲಂ ಕೂಡ ಇದೆ. ಇತ್ತೀಚೆಗೆ ಎಕ್ಸಿಕ್ಯುಟಿವ್ ಇಂಜಿನಿಯರ್ ವಾರ್ಡ್ ನಂ.30 ಕ್ಕೆ ಬಂದು ಇನ್ನು ಮೂರು ದಿವಸದಲ್ಲಿ ಸಮಸ್ಯೆ ನಿವಾರಿಸುತ್ತೇವೆಂದು ಹೇಳಿ ಹೋಗಿದ್ದಾರೆ. ಈಗಾಗಲೇ 15 ದಿವಸಗಳಾಗಿದ್ದರೂ ಇದುವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಚಾಮರಾಜಪೇಟೆಯ 5 ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಸಿಕ್ಕಾಪಟ್ಟೆ ಇದೆ. ನಾನು ಮಂತ್ರಿಗಳಲ್ಲಿ ವಿನಂತಿ ಮಾಡುವುದಿಷ್ಟೆ, ನೀವು ಅಧಿಕಾರಿಗಳಿಗೆ ಹೇಳಿ ನೀರಿನ ವ್ಯವಸ್ಥೆ ಮತ್ತು ಸ್ಯಾನಿಟರಿ ವ್ಯವಸ್ಥೆಯನ್ನು ಸರಿಯಾಗಿ ಮಾಡಿಸಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಧಿಕಾರಿಗಳು ಮಾನ್ಯ ಶಾಸಕರ ಜೊತೆಯಲ್ಲಿ ಅವರ ಕ್ಷೇತ್ರದಲ್ಲಿ ಪ್ರವಾಸವನ್ನು ಮಾಡಿ ಏನೇನು ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿ ಈಗಾಗಲೇ ಒಂದು ಕ್ರಿಯಾ ಯೋಜನೆಯನ್ನು ರೂಪಿಸಿದ್ದಾರೆ. ಸದ್ಯದಲ್ಲಿಯೇ ಆ ಬಗ್ಗೆ ಟೆಂಡರ್ ಕರೆದು ಆ ಕಾಮಗಾರಿಗಳನ್ನು ಮಾಡಿಸುತ್ತೇವೆ. ಈಗಾಗಲೇ ಯಾವ ಕಾಮಗಾರಿಗಳನ್ನು ನಾವು ಕೈಗೆತ್ತಿಕೊಂಡಿದ್ದೆವೋ ಅದರ ಪೂರ್ಣ ವಿವರಗಳನ್ನು ಮಾನ್ಯ ಶಾಸಕರಿಗೆ ನಾವು ಒದಗಿಸಿದ್ದೇವೆ. ಇನ್ನು ಮುಂದೆ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ಇರುತ್ತದೆ ಎಂದು ಎಲ್ಲರಿಗೂ ಗೊತ್ತಿರುವಂಥ ಸಂಗತಿಯೇ ಆಗಿದೆ. ಬೇಡಿಕೆಗನುಗುಣವಾಗಿ ನಮ್ಮ ಪೂರೈಕೆ ಇಲ್ಲ. ಆದುದರಿಂದ ಬೆಂಗಳೂರಿನ ಎಲ್ಲಾ

ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆದರೆ ಒಳಚರಂಡಿ ವ್ಯವಸ್ಥೆಗೆ ಮತ್ತು ಇತರೆ ಕಾಮಗಾರಿಗಳಿಗೆಲ್ಲದಕ್ಕೂ ನಾವು ಟೆಂಡರ್‌ನ್ನು ಕರೆದಿದ್ದೇವೆ. ಎಲ್ಲಾ ಮೂವತ್ತು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಕೂಡ ಸದ್ಯದಲ್ಲಿಯೇ ಈ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತೇವೆ.

260 ಶ್ರೀ ಎಸ್.ಆರ್.ವಿಶ್ವನಾಥ್

ಅ ಅರ್ಕಾವತಿ ನದಿಯು ನಂದಿ ಬೆಟ್ಟದಲ್ಲಿ ಹರಿದು ಸುಮಾರು 1200 ಕ್ಕೂ ಹೆಚ್ಚು ಕೆರೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ನದಿಯು ಹರಿಯುವುದರಿಂದ ಕೆರೆಗಳು ತುಂಬಿ ನೀರಿನ ಜಲಮಟ್ಟ ಉತ್ತಮವಾಗಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಅರ್ಕಾವತಿ ನದಿಯ ಪಾತ್ರದಲ್ಲಿರುವ ಹೆಸರುಘಟ್ಟ ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯಗಳು ಬೆಂಗಳೂರು ಜಲ ಮಂಡಳಿಯ ವ್ಯಾಪ್ತಿಗೆ ಒಳಪಡುವುದೆಂದು ಮಂಡಳಿಯು ತಿಳಿಸಿದೆ. ಬಾಕಿ ಉಳಿದಂತೆ ಅರ್ಕಾವತಿ ನದಿಯಲ್ಲಿ ಉತ್ತಮವಾದ ಹರಿವು ಇದ್ದಾಗ ಜಲಾಶಯಗಳು ಮತ್ತು ಕೆರೆಗಳು ತುಂಬಿ ಜಲಮಟ್ಟ ಉತ್ತಮವಾಗುವುದೆಂದು ಸಣ್ಣ ನೀರಾವರಿ ಇಲಾಖೆಯು ತಿಳಿಸಿದೆ.

ಆ ನದಿಯ ಒತ್ತುವರಿ ಮತ್ತು ಅಕ್ರಮ ಕಟ್ಟಡಗಳು ಮತ್ತು ರಾಜ ಕಾಲುವೆ ಒತ್ತುವರಿಯಿಂದ ನದಿಯು ಬತ್ತಿ ಹೋಗಿದ್ದು, ಅದನ್ನು ಪುನಃಶ್ಚೇತನಗೊಳಿಸುವ ವಿಚಾರ ಯಾವ ಹಂತದಲ್ಲಿದೆ.

ಅರ್ಕಾವತಿ ನದಿಯ ಹೆಸರುಘಟ್ಟ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯಗಳನ್ನು ಪುನಃಶ್ಚೇತನಗೊಳಿಸಲು ನಂದಿ ಬೆಟ್ಟದಿಂದ ತಿಪ್ಪಗೊಂಡನಹಳ್ಳಿವರೆವಿಗೂ ನದಿ ಪಾತ್ರದಲ್ಲಿ ಬೆಳೆದಿರುವ ಗಿಡಗಂಟೆ, ಹೂಳಿನ ಪ್ರಮಾಣ, ಉಪ ನಾಲೆಗಳು ಮತ್ತು ಕೆರೆಗಳ ವಿವರ, ಭೂಮಿಯ ಅತಿಕ್ರಮಣ ಹಾಗೂ ಉಪಯೋಗದ ಪರಿವರ್ತನೆ, ಮಳೆನೀರು ಹರಿಯುವಿಕೆಗೆ ಇರುವ ಅಡಚಣೆಗಳು ಇವೆಲ್ಲದರ ಬಗ್ಗೆ ಸಂಪೂರ್ಣ ಸರ್ವೆ ಕಾರ್ಯವನ್ನು ಕೈಗೊಂಡು, ಪುನಃಶ್ಚೇತನಕ್ಕೆ ಕಾರ್ಯಕ್ರಮ ರೂಪಿಸಲಾಗಿದೆ. ಈ ಕಾರ್ಯಕ್ರಮದಂತೆ, ಈ ಕಾರ್ಯಕ್ಕಾಗಿ 2009–10ನೇ ಸಾಲಿನಲ್ಲಿ ರೂ.2.00 ಕೋಟಿಗಳ ಅನುದಾನವನ್ನು ನಗರಾಭಿವೃದ್ಧಿ ಇಲಾಖೆಗೆ ಒದಗಿಸಿದೆ.